ಸಿ.ಸಿ.ನಂ.444/2024
ಪಿ.ಡಬ್ಲ್ಯೂ.1

**ಸಾಕ್ಷಿಗೆ ದಿನಾಂಕ : 16-12-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಶ್ರೀಮತಿ.ಎಸ್.ಬಿ.ಪಿ ವಕೀಲರಿಂದ ಆರೋಪಿ ಪರವಾಗಿ**

1. ನಾನು ಮುಧೋಳದಲ್ಲಿ ಕಳೆದ 40 ವರ್ಷದಿಂದ ವಾಸಿಸುತ್ತಿದ್ದು, ಬ್ಯುಟಿಶಿಯನ್ ಆಗಿ ಕೆಲಸ ಮಾಡುತ್ತಿದ್ದೇನೆ. ಆರೋಪಿತಳು ನನ್ನ ಪಾರ್ಲರಗೆ ಬರುತ್ತಿದ್ದು, ಆದ್ದರಿಂದ ಪರಿಚಿತಳು. ಆರೋತಪಿಳು ವ್ಯಾಪಾರ ಮಾಡುತ್ತಾಳೆ ಎಂದು ನೀವು ದೂರಿನಲ್ಲಿ ನಮೂದಿಸಿದ್ದು ಯಾವ ವ್ಯಾಪಾರ ಮಾಡುತ್ತಾಳೆ ಎಂದರೆ ಯಾವ ವ್ಯಾಪಾರ ಮಾಡುತ್ತಾಳೆ ಎಂದು ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಆರೋಪಿತಳು ನನಗೆ 7 ವರ್ಷದಿಂದ ಪರಿಚಿತಳು. ಆರೋಪಿತಳಿಗೆ ನಾನು 7 ವರ್ಷದಲ್ಲಿ 2 ರಿಂದ 3 ಬಾರಿ ಹಣ ಕೊಡುವುದು ತೆಗೆದುಕೊಳ್ಳುವುದು ಮಾಡಿದ್ದೇನೆ. ಮಗನ ವಿದ್ಯಾಬ್ಯಾಸಕ್ಕಾಗಿ ಒಂದು ಬಾರಿ 50 ಸಾವಿರ ರೂಪಾಯಿ, ಮತ್ತೊಂದು ಬಾರಿ 1 ಲಕ್ಷ 50 ಸಾವಿರ ಹಣ ನೀಡಿದ್ದೆ. ಸದರಿ ಮೇಲೆ ತೆಗೆದಕೊಂಡ ಮೊತ್ತಗಳನ್ನು ಆರೋಪಿತಳು ನನಗೆ ಹಿಂದಿರುಗಿಸಿದ್ದಳು. ಭದ್ರತೆಗಾಗಿ ಮೇಲೆ ಹೇಳಿದ ಹಣ ನೀಡುವ ಸಮಯದಲ್ಲಿ ಬಾಂಡ್ ಪೇಪರ ಬರೆಸಿಕೊಂಡಿದ್ದು, ಹಣ ಹಿಂದಿರುಗಿಸಿದ ನಂತರ ಸದರಿ ಬಾಂಡ್ ಪೇಪರಗಳನ್ನು ಹರಿದು ಹಾಕಿರುತ್ತೇನೆ. ಮೇಲೆ ಹೇಳಿದ ಎರಡು ಬಾರಿ ಹಣ ಕೇಳುವ ಸಂದರ್ಭದಲ್ಲಿ ಒಬ್ಬಳೇ ಬಂದಿದ್ದಳು. ಪಾರ್ಲರನಲ್ಲಿ ಸಾಮಾನ್ಯವಾಗಿ ಜನ ಇರುತ್ತಾರೆ ಎಂದರೆ ಸರಿ. ನೀವು ಆ ರೀತಿ ಹಣ ನೀಡುವಾಗ ಬೇರೆ ಯಾರಾದಾರೂ ಇದ್ದರಾ ಎಂದರೆ ಇರಲಿಲ್ಲ ಎಂದು ಸಾಕ್ಷಿ ಹೇಳುತ್ತಾರೆ.

2. ನನಗೆ ಪಾರ್ಲರ ನಡೆಸುವುದರಿಂದ ದಿನಕ್ಕೆ 4 ರಿಂದ 5 ಸಾವಿರ ರೂಪಾಯಿ ಆದಾಯ ಇದೆ. ವಾರ್ಷಿಕ ಅಂದಾಜು ಎಷ್ಟು ಆದಾಯ ಇದೆ ಎಂದರೆ 7 ರಿಂದ 8 ಲಕ್ಷ ರೂಪಾಯಿ ಇದೆ ಎಂದು ಸಾಕ್ಷಿ ಹೇಳುತ್ತಾರೆ. ಸದರಿ ಪಾರ್ಲರ ನಡೆಸಲು ನಗರಸಭೆಯ ಲೈಸೆನ್ಸ ಇದೆ. ನಾನು ಕೋವಿಡ್ ಮಹಾಮಾರಿ ಬರುವ ಪೂರ್ವದಲ್ಲಿ ಆದಾಯ ತೆರಿಗೆ ಪಾವತಿ ಮಾಡುತ್ತಿದ್ದು, ತದನಂತರ ಪಾವತಿ ಮಾಡುವುದಿಲ್ಲ. ಸದರಿ ಆದಾಯ ತೆರಿಗೆ ಪಾವತಿ ಮಾಡಿದ ಬಗ್ಗೆ ದಾಖಲಾತಿಗಳನ್ನು ಹಾಜರಪಡಿಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ.

3. ಆರೋಪಿತಳು ಮನೆ ಅಡಚಣೆ ಇದೆ ಎಂದು 5 ಲಕ್ಷ 50 ಸಾವಿರ ಹಣ ಕೇಳಿದ್ದಳು. ಆರೋಪಿತಳು ನನಗೆ ಜೂನ್-2023 ರಲ್ಲಿ ಹಣ ಕೇಳಿದ್ದು, ದಿಃ31.07.2023 ರಂದು ಹಣ ನೀಡಿರುತ್ತೇನೆ. 2023 ರಲ್ಲಿ ಹಣ ಕೇಳಲು ಆರೋಪಿತಳು ಒಬ್ಬಳೆ ಬಂದಿದ್ದಳು. ಆರೋಪಿತಳಿಗೆ ನಾನು ಹಣವನ್ನು ನೀಡಿದಾಗ ಮನೆಯಲ್ಲಿ ಯಾರು ಯಾರು ಇದ್ದರು ಎಂದರೆ ಸಾಕ್ಷಿಯು ನಾನು ಹಣವನ್ನು ಮನೆಯಲ್ಲಿ ಕೊಟ್ಟಿಲ್ಲ ಬಾಂಡ್ ರೈಟರ ಕಚೇರಿಯಲ್ಲಿ ದಿಃ31.07.2023 ರಂದು ನೀಡಿದ್ದೇನೆ ಎಂದು ಹೇಳುತ್ತಾರೆ. ಬಾಂಡ್ ಪೇಪರನಲ್ಲಿ ಯಾವ ಕಾರಣ ನಮೂದಿಸಲಾಗಿದೆ ಎಂದು ಹೇಳಬಹುದೆ ಎಂದರೆ ಮನೆ ಅಡಚಣೆ ಎಂದು ಅವರೆ ಹೇಳಿ ನಾನು ಹೋಗುವುದರೊಳಗೆ ಬರೆಯಿಸಿ ಇಟ್ಟಿದ್ದೆ ಎಂದು ಹೇಳುತ್ತಾರೆ. ನಿಖರವಾಗಿ ಯಾವ ಅಡಚಣೆ ಇತ್ತು ಎಂದು ಕೇಳಿ ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಾನು ಬಾಂಡ್ ರೈಟರ ಕಚೇರಿಗೆ ಹೋದಾಗ ಸಾಯಂಕಾಲ 4-30 ರಿಂದ 5-00 ಗಂಟೆಯ ಸಮಯ ಆಗಿತ್ತು. ಬಾಂಡ್ ಪೇಪರನ್ನು ಆರೋಪಿತಳೆ ತಂದಿದ್ದಳು. ಬಾಂಡ್ ಪೇಪರನ್ನು ಸಿ.ಬಿ.ಕುಳಲಿ ಎನ್ನುವ ಬಾಂಡ್ ರೈಟರ ಬಳಿ ಬರೆಸಲಾಯಿತು. ಆರೋಪಿತಳೊಂದಿಗೆ ಸುಮಿತ್ರಾ ಬಡಿಗೇರ, ನಮ್ಮಿಬ್ಬರ ಪರಿಚಯಸ್ಥರಾದ ವಿಶಾಲ ಮುರಕಟನಾಳರವರು ಹಾಜರ ಇದ್ದರು ಎಂದು ಸಾಕ್ಷಿ ಹೇಳುತ್ತಾರೆ. ಸುಮಿತ್ರಾ ಬಡಿಗೇರ ಮತ್ತು ವಿಶಾಲ ಮುರಕಟನಾಳ ಇವರಿಗೆ ನೀವು ಬಡ್ಡಿ ಆಧಾರದ ಮೇಲೆ ಸಾಲ ನೀಡಿದ್ದೀರಿ ಎಂದರೆ ಸರಿಯಲ್ಲ. ಸುಮಿತ್ರಾ ಬಡಿಗೇರ ಅವರ ಮೇಲೆ ವಿಶಾಲ ಮುರಕಟನ್ನಾಳರವರ ಕಡೆಯಿಂದ ಸಾಲದ ಮರುಪಾವತಿಗಾಗಿ ಅಸಲು ದಾವಾ ಸಂಖ್ಯೆ 114/2023 ರಂತೆ ದಾವೆ ಸಲ್ಲಿಸಿದ್ದೀರಿ ಎಂದರೆ ಅವರಿಬ್ಬರ ನಡುವಿನ ದಾವೆ ಇದ್ದು, ನನಗೆ ಸಂಬಂಧ ಇಲ್ಲ ಎಂದು ಹೇಳುತ್ತಾರೆ.

4. ನನ್ನ ಮಕ್ಕಳ ಹೆಸರು ಅಭಿಷ್ಷೇಕ ಜೋಶಿ ಮತ್ತು ಅಕ್ಷತಾ ಜೋಶಿ. ನೀವು ಕೈಗಡ ಪತ್ರ ಬರೆಸಿಕೊಂಡ ದಿಃ31.07.2023 ರಂದೆ ಆರೋಪಿತಳು ನಿಮಗೆ ಚೆಕ ನೀಡಿದ್ದಾಳೆ ಎಂದರೆ ಸರಿಯಲ್ಲ. ಆರೋಪಿತಳ ಕಡೆಯಿಂದ ನೀವು ಹಣದ ಭದ್ರತೆಗಾಗಿ ಸಹಿ ಮಾಡದ 2 ಖಾಲಿ ಚೆಕಗಳನ್ನು ಪಡೆದುಕೊಂಡಿದ್ದೀರಿ ಎಂದರೆ ಸರಿ. ನೀವು ಮಹಿಳಾ ಸಂಘಗಳನ್ನು ನಡೆಸುತ್ತೀರಿ ಎಂದರೆ ಸರಿಯಲ್ಲ. ನೀವು ದುರ್ಗಾವಾಹಿನಿ ಹೆಸರಿನಲ್ಲಿ ಎನ್.ಜಿ.ಓ ನಡೆಸುತ್ತೀರಿ ಎಂದರೆ ಸರಿ. ಸದರಿ ಎನ್.ಜಿ.ಓ ಅನ್ನು 11 ವರ್ಷಗಳಿಂದ ನಡೆಸುತ್ತಿದ್ದೇನೆ. ಎನ್.ಜಿ.ಓ ಕಡೆಯಿಂದ ಏನು ಕೆಲಸ ಮಾಡಿಸುತ್ತೀರಿ ಎಂದರೆ ಯಾವುದೇ ಕೆಲಸ ಮಾಡಿಸಿಲ್ಲ ಎಂದು ಹೇಳುತ್ತಾರೆ. ಸದರಿ ಎನ್.ಜಿ.ಓ ನಲ್ಲಿ 9 ಜನ ಸದಸ್ಯರು ಇದ್ದಾರೆ. ಸದರಿ ಎನ್.ಜಿ.ಓ ಮೂಲಕ ಅದರ ಸದಸ್ಯರಿಗೆ ಅವರ

ಉದ್ಯೋಗದ ತಕ್ಕಂತೆ 50 ಸಾವಿರದಿಂದ 70 ಸಾವಿರ ಹಣ ನೀಡುತ್ತೀರಿ ಎಂದರೆ ಸರಿಯಲ್ಲ. ಪ್ರತಿ ಶನಿವಾರ 50 ಸಾವಿರ ರೂಪಾಯಿಗೆ ಒಂದೂವರೆ ಸಾವಿರದಂತೆ ಹಣ ಕಟ್ಟುತ್ತಾ ಹೋಗಬೇಕು ಎಂದರೆ ಸರಿಯಲ್ಲ. ಆ ರೀತಿ ಹಣ ಶನಿವಾರ ಕಟ್ಟದೇ ಇದ್ದರೆ ಸೋಮವಾರದಂದು 400 ರೂಪಾಯಿ ಬಡ್ಡಿ ಹಚ್ಚಿ ಸದರಿ ಮೊತ್ತ ಕಟ್ಟಿಸುತ್ತೀರಿ ಎಂದರೆ ಸರಿಯಲ್ಲ. ಆ ರೀತಿ ಆರೋಪಿತಳು ಪ್ರತಿವಾರದಂದು ಹಣ ಕಟ್ಟುತ್ತಾ ಬಂದು ನಿಮ್ಮಿಂದ ಪಡೆದ ಎಲ್ಲಾ ಸಾಲದ ಮೊತ್ತವನ್ನು ಹಿಂದಿರುಗಿಸಿದ್ದಾಳೆ ಎಂದರೆ ಸರಿಯಲ್ಲ. ನೀವು ಆ ರೀತಿ ಪ್ರತಿವಾರದಂದು ಹಣ ಪಡೆದ ಬಗ್ಗೆ ರಸೀದಿಗಳಿಗೆ ಸಹಿ ಮಾಡಿ ನೀಡುತ್ತೀರಿ ಎಂದರೆ ಸರಿಯಲ್ಲ. ಆ ರೀತಿ ಎನ್.ಜಿ.ಓ ನಲ್ಲಿ ನೀವು ಹಣ ಪಡೆದ ಬಗ್ಗೆ ಒಂದು ಬುಕನಲ್ಲಿ ನಮೂದಿಸಿಕೊಂಡು ಇಟ್ಟುಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಮೇಲೆ ಹೇಳಿದಂತೆ ಎನ್.ಜಿ.ಓ ಮೂಲಕ 25 ರಿಂದ 30 ಜನ ಹೆಣ್ಣುಮಕ್ಕಳು ಸಾಲದ ಮೊತ್ತ ಪಡೆದಿದ್ದಾರೆ ಎಂದರೆ ಸರಿಯಲ್ಲ. ಸಾಲದ ಮೊತ್ತ ಮೇಲೆ ಹೇಳಿದಂತೆ ನೀಡಿದಾಗ ಭದ್ರತೆಗಾಗಿ ಖಾಲಿ ಚೆಕ ಪಡೆದಿರುತ್ತೀರಿ ಎಂದರೆ ಸರಿಯಲ್ಲ. ನಾನು ಈ ಪ್ರಕರಣ ಸೇರಿ ಒಟ್ಟು ಎಷ್ಟು ಚೆಕ ಬೌನ್ಸ ಪ್ರಕರಣ ಸಲ್ಲಿಸಿದ್ದೀರಿ ಎಂದರೆ ಇದೊಂದೆ ಎಂದು ಹೇಳುತ್ತಾರೆ. ನೀವು ಹೆಚ್ಚಿನ ಮೊತ್ತದ ಚೆಕ್ಕನ್ನು ಪಡೆದುಕೊಂಡು ಬೇರೆ ಬೇರೆಯವರ ಕಡೆಯಿಂದ ಹಣ ಮರುಪಾವತಿಗಾಗಿ 15 ರಿಂದ 20 ದಾವೆಗಳನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಸುಮಿತ್ರಾ ಬಡಿಗೇರ ಅವರ ವಿರುದ್ದ ಸಹ ನೀವು ಅದೇ ರೀತಿ ಬೇರೆಯವರ ಕಡೆಯಿಂದ ದಾವೆ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಆದ್ದರಿಂದಲೇ ನೀವು ಅವರ ವಿರುದ್ದ ಅನಗತ್ಯ ಕ್ರಮ ಕೈಗೊಳ್ಳುತ್ತೀರಿ ಎಂದು ಹೆದರಿ ಸುಮಿತ್ರಾ ಬಡಿಗೇರ ಇವರು ನೀವು ಎಲ್ಲಿ ಹೇಳಿದ್ದೀರೋ ಅಲ್ಲಿಗೆ ಬಂದು ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನೀವು ಎಷ್ಟು ಬಡ್ಡಿಗೆ ಸಾಲ ನೀಡುತ್ತೀರಿ ಎಂದರೆ ನಾನು ಬಡ್ಡಿಗೆ ಸಾಲ ನೀಡುವುದಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನೀವು ಬಡ್ಡಿಗೆ ಸಾಲ ನೀಡಿ ಹಣ ತುಂಬುವಂತೆ ಒತ್ತಾಯ ಮಾಡಿ ಸುಳ್ಳು ಪ್ರಕರಣ ದಾಖಲಿಸುತ್ತೀರಿ ಎಂದರೆ ಸರಿಯಲ್ಲ.

5. ನೀವು ಪಾರ್ಲರ ಹೊರತುಪಡಿಸಿ ಬೇರೆ ಯಾವುದೇ ಉದ್ಯೋಗ ಮಾಡುವುದಿಲ್ಲ ಎಂದರೆ ಕೃಷಿ ಸಹ ಮಾಡುತ್ತೇನೆ ಎಂದು ಹೇಳುತ್ತಾರೆ. ನಾನು ಸೊರಗಾಂವದಲ್ಲಿ ಇದ್ದ ನನ್ನ ಸಹೋದರಿ ಭಾರತಿ ಪಾಚಂಡಿ ಅವರ ಜಮೀನಿನಲ್ಲಿ ಕೃಷಿ ಮಾಡುತ್ತಿದ್ದು, ಅದರ ಸರ್ವೆ ನಂಬರ ನನಗೆ ಗೊತ್ತಿಲ್ಲ. ಸದರಿ ಹೊಲದಲ್ಲಿ ಕಬ್ಬು ಬೆಳೆಯುತ್ತಿದ್ದು, ಸದರಿ ಕಬ್ಬು ನಿರಾಣಿ ಫ್ಯಾಕ್ಟರಿಗೆ ಹೋಗುತ್ತಿದ್ದು, ವರ್ಷಕ್ಕೆ ಸುಮಾರು 4 ಲಕ್ಷ 50 ಸಾವಿರ ಆದಾಯ ಅದರಿಂದ ಇದೆ ಎಂದು ಸಾಕ್ಷಿ

ನುಡಿಯುತ್ತಾರೆ. ಕೃಷಿ ಮಾಡುತ್ತೀರಿ ಎಂದು ತೋರಿಸಲು ಮತ್ತು ಆದಾಯ ಮೇಲೆ ಹೇಳಿದಂತೆ ಬರುತ್ತದೆ ಎಂದು ತೋರಿಸಲು ದಾಖಲಾತಿಗಳನ್ನು ಹಾಜರಪಡಿಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನೀವು ಪಾರ್ಲರದಿಂದ ಬರುತ್ತದೆ ಎಂದು ಹೇಳುವ ಮೊತ್ತ ತೋರಿಸಲು ದಾಖಲಾತಿ ಇಟ್ಟುಕೊಂಡಿದ್ದೀರಾ ಎಂದರೆ ಯು.ಪಿ.ಐ ಮೂಲಕ ಬಂದದ್ದರ ಮೊತ್ತ ಖಾತೆಗೆ ಬರುತ್ತಿದ್ದು, ನಗದು ರೂಪದಲ್ಲಿ ಬಂದ ಮೊತ್ತದ ಯಾವುದೇ ದಾಖಲಾತಿ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಯು.ಪಿ.ಐ ಮೂಲಕ ಆದ ದಾಖಲಾತಿಗಳನ್ನು ತೋರಿಸಿ ಆದಾಯ ತೆರಿಗೆ ಪಾವತಿ ಮಾಡುತ್ತೇನೆ. ನಿಮ್ಮ ಖಾತೆಗೆ ಸಂಬಂಧಿಸಿದಂತೆ ಜೂನ್-2023 ರಿಂದ ಇಲ್ಲಿಯವರೆಗಿನ ಖಾತಾ ಉತಾರೆ ಹಾಜರಪಡಿಸಲು ಏನಾದರೂ ತೊಂದರೆ ಇದೆಯಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ.

ಮುಂದುವರೆದ ಪಾಟೀ ಸವಾಲು ಮಾಡಲು ಸಮಯವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ . ಹೇ. ಕೆ . ಸರಿ ಅದೆ.

Sd/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು/
ಜೆ.ಎಂ.ಎಫ್.ಸಿ., ಮುಧೋಳ